ರೇವತಿ ತನ್ನ ಕೈ ಮೇಲೆತ್ತಿದಳು. ವಿದ್ಯುತ್ ಬಲ್ಬಿನ ಎದುರು ಕೈ ಒಯ್ದು ತನ್ನ ತುಟಿಗಳಲ್ಲಿ ಒತ್ತಿಟ್ಟ ಕೂದಲುಗಳನ್ನು ನೋಡತೊಡಗಿದಳು. ಕೂದಲು... ಒಂದು ಉದ್ದ ರೇಶಿಮೆಯ ಕೂದಲು. ನಾನೂ ಆ ಕೂದಲು ನೋಡಿದೆ. ನನಗೆ ಸರಿಯಾಗಿ ಕಾಣಲೆಂದು ಅವಳು ಆ ಕೂದಲು ನನ್ನೆದುರು ತಂದಳು.

'ಇಲ್ನೋಡು...' ನಾನು ಏನೋ ಹೇಳಲು ಬಯಸುತ್ತಿದ್ದೆ.

'ನನಗೆ ಏನೂ ಕೇಳೋದಿಲ್ಲ' ಎಂದು ಕಾಲು ಅಪ್ಪಳಿಸುತ್ತ ರೇವತಿ ಒಳನಡೆದಳು. ವೇದಿಕೆಯ ಮೇಲಿನ ಭಾಷಣಗಳು, ಕಥೆಗಳಲ್ಲಿರುವ ಕಲ್ಪನೆಗಳು ನನ್ನದಾಗಿವೆ.

ಅವಳ ಕಣ್ಣುಗಳಲ್ಲಿ ಈಗ ಜಲಧಾರೆ ಹರಿಯುತ್ತಿದೆಯೆಂದು ನನಗೆ ಗೊತ್ತಿತ್ತು. ಸೆರಗಿನಿಂದ ಕಣ್ಣು ಮತ್ತು ಮೂಗು ಒರೆಸಿಕೊಳ್ಳುತ್ತ ಅವಳು ಮೌನವಾಗಿ ಕೆಲಸ ಮಾಡುತ್ತಿದ್ದಳು. ಅವಳ ಪುನರ್ಪುಳಿಯಂತೆ ಕೆಂಪಗಾದ ಮೂಗು ನೋಡಿ ಅವಳ ಬಗ್ಗೆ ಕರುಣೆಯುಂಟಾಗುತ್ತಿತ್ತು.

ಈಗ ಅವಳ ಬಳಿ ಹೋದರೆ ಅವಳು ನನ್ನನ್ನು ಮೌನದಿಂದಲೇ ದೂರ ತಳ್ಳುತ್ತಾಳೆ. ಈಗ ಅವಳನ್ನು ಮಾತಾಡಿಸುವುದು ಸರಿಯಲ್ಲ; ನಾಳೆ ಬೆಳಿಗ್ಗೆ ನೋಡಿಕೊಳ್ಳೋಣವೆಂದು ನಾನೇ ಮೌನಕ್ಕೆ ಶರಣಾದೆ.

> **ರೇವತಿ ನಗುತ್ತ ಮುಂದೆ ನಡೆದಳು... ನಿಜಕ್ಕೂ ರೇವತಿ ಎಲ್ಲರಿಗಿಂತ ಭಿನ್ನ. ಅವಳು ನನ್ನ ಮೇಲೆ ಕೋಪಿಸಬಹುದು, ಬಡಬಡಿಸಬಹುದು ಆದರೆ ಎಂದೂ ಅವಳು ನನ್ನಿಂದ ದೂರ ಇರಲಾರಳು.**

ನಾನು ಏನು ಹೇಳಿದರೂ ಅವಳಿಗೆ ಅದು ಕಥೆಯಂತೆ ಕೇಳಿಸುತ್ತದೆಯೆಂಬುದು ನನಗೆ ಗೊತ್ತಿತ್ತು. ಈ ಹಿಂದೆ ಒಮ್ಮೆ ಬಸ್ಸಿನಲ್ಲಿ ನನ್ನ ಬುಶ್‌ಕೋಟಿನ ಹಿಂಭಾಗದಲ್ಲಿ ಲಿಪ್‌ಸ್ಟಿಕ್ಕಿನ ಕಲೆ ಮೂಡಿತ್ತು. ಇನ್ನೊಮ್ಮೆ ಆಫೀಸಿನ ಫೈಲು ಮನೆಗೆ ತಂದಾಗ ಅದರಲ್ಲಿ ಹೆರಳಿಗೆ ಹಾಕುವ ಚಿಮ್ಮಟಿಗೆ ಇತ್ತು. ಅದು ಟೇಬಲ್ ಮೇಲಿಡುವಾಗ ಕೆಳಗೆ ಬಿತ್ತು. ಮೊದಲ ಪ್ರಕರಣದಲ್ಲಿ ರೇವತಿ ಏನೂ ಮಾತನಾಡಲಿಲ್ಲ. ಎರಡನೆಯ ಪ್ರಕರಣದಲ್ಲಿ ಮಾತ್ರ ನಾನು ಎಷ್ಟು ವಿವರಿಸಿ ಹೇಳಲು ಪ್ರಯತ್ನಿಸಿದರೂ ಕೇಳಿಸಿಕೊಳ್ಳದೆ ಮೂರು ದಿನ ಮಾತು ನಿಲ್ಲಿಸಿದ್ದಳು. ಆಫೀಸಿನ ಫೈಲುಗಳು ಹುಡುಗಿಯರ ಮೇಜಿಗೇ ಹೋಗುತ್ತವೆ. ಯಾರೋ ಒಬ್ಬಳು ತಲೆ ತುರಿಸುತ್ತ ಮುಡಿಗೆ ಸಿಕ್ಕಿಸಿಕೊಂಡ ಚಿಮಟಿಗೆ ಮೇಜಿನ ಮೇಲಿದ್ದ ಫೈಲಿನಲ್ಲಿಡುವ ಸಾಧ್ಯತೆಯಿದೆಯೆಂದು ಹೇಳಿದರೂ ಅವಳು ನಂಬಿರಲಿಲ್ಲ.

ಆದರೆ ಬೆಳಿಗ್ಗೆ ನಾನು ಮನೆಯಿಂದ ಹೊರಡುವಾಗ ರೇವತಿ ನನ್ನ ಮನೆಯ ಕೀಲಿ ತಂದು ನನ್ನ ಕೈಗಿಟ್ಟು 'ನಾನು ಅಮ್ಮನ ಮನೆಗೆ ಹೋಗ್ತೀನಿ' ಅಂತ ಅಂದಾಗ ಮಾತ್ರ ನಾನು ಗಡಬಡಿಸಿದೆ. ನಾನು ಮಾತನಾಡುತ್ತ ನಿಂತರೆ ಬಸ್ ತಪ್ಪಿ ಹೋಗುತ್ತಿತ್ತು. ಆಫೀಸಿಗೆ ಸಮಯಕ್ಕೆ ಸರಿಯಾಗಿ ತಲುಪಬೇಕಿತ್ತು. ಆದರೆ ನನ್ನ ಮಾತು ಕೇಳಲು ರೇವತಿ ನಿಲ್ಲಲಿಲ್ಲ.

ಆ ದಿನ ಮಧ್ಯಾಹ್ನವೇ ಮನೆಗೆ ಬಂದೆ. ಮದುವೆಯಾದ ನಂತರ ಇದು ಮೊದಲ ದಿನ ಬಾಗಿಲ ಬೀಗ ತೆಗೆದು ಮನೆಯಲ್ಲಿ ಕಾಲಿಟ್ಟಿದ್ದು. ರೇವತಿ ಹೋದಳು ತವರಿಗೆ, ಹೋದರೆ ಹೋಗಲಿ. ನಾನೇ ಒಯ್ದು ಮುಟ್ಟಿಸಿ ಬರುತ್ತಿದ್ದೆ. ಅವಳು ಮಾತನಾಡದೆ ಹೋದಳು. ಅವಳ ನೆನಪು ಮಾತ್ರ ಹೋಗಲಿಲ್ಲ. ನನ್ನ ಚಿತ್ತಸೂರೆ ಮಾಡಿಕೊಂಡು ಹೋದಳು. ನಾನು ಎಂದಿನಂತೆ ಬಸ್ ಹಿಡಿದು ಪಣಜಿಗೆ ಹೋಗುತ್ತೇನೆ. ಆಫೀಸಿನಲ್ಲಿ ಕೆಲಸ ಮಾಡುತ್ತೇನೆ. ಸಂಜೆ ಮನೆಗೆ ಮರಳುತ್ತೇನೆ. ಬೋರಿಯ ಸೇತುವೆಯ ಬಳಿ ಇಳಿದಾಗ 'ಜಾಜಿ ತಗೊಳ್ಳಿ, ಜಾಜಿ ಮಾಲೆ ತಗೊಳ್ಳಿ' ಎಂದು ಹೂ ಮಾರುವ ಹುಡುಗರು ಮುತ್ತಿಕೊಂಡಾಗ ಮಾತ್ರ ನಾನು ಅಸ್ವಸ್ಥನಾಗುತ್ತೇನೆ. ಆ ದಿವಸ ನಾನು ರೇವತಿಗೆ ಜಾಜಿಯ ಹೂವಿನ ಮಾಲೆ